Sri H. C. LINGA REDDY.—May I know what action the Government of Mysore themselves have taken if some of the recommendations are useful to us ?

Sri H. SIDDAVEERAPPA.—They have made certain recommendations as to how to reduce the prices charged on manganese ores supplied to the Works and the Mysore Government to examine the possibilities of supplying cheap electric power at special rate to the Works.

Sri H. C. LINGA REDDY.—Have our Government taken any action, is my question.

Sri H. SIDDAVEERAPPA.—In the light of what we have now been doing it is very difficult to take any action on some of these recommendations.

ಶ್ರೀ ಬಿ. ಹುಚ್ಚೇಗೌಡ.—ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಿ ಹನ್ನೊಂದೂವರೆ ಕೋಟಿ ರೂಪಾಯಿ ಕೇಳಿದ್ದೀವೆಂದು ಹೇಳಿದ್ದೀರಿ. ಇದರಲ್ಲಿ ಎಷ್ಟು ಮಂಜೂರಾಗಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲಸ ನಡೆಯುತ್ತಿದೆ. ಈವರೆಗೂ ಸಾಲ ಮಂಜೂರಾಗಿ ಬಂದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಎರಡನೆ ಪಾಂಚವಾರ್ಷಿಕ ಯೋಜನೆಯ ಪ್ರಕಾರ ತಾವು ಏನೂ ಡೆವಲಪ್‌ಮೆಂಟ್ ಕೆಲಸಗಳನ್ನು ತೆಗೆದುಕೊಂಡಿಲ್ಲವೆ ?

Sri H. SIDDAVEERAPPA.—Go ahead ಎಂದು ಹೇಳಿದ್ದಾರೆ. We are going ahead. Now the scheme sanctioned is:

	Crores of Rupees.
Ferro-alloy plant ...	1·50
Steel expansion ...	3·00
Extensions to Foundries, Yard, Electricity supply system, tramways, etc.	1·00
Spun Pipe Plant and Sintering Plant (carried forward from First Five-Year Plan)	0·45
	5·95

We are going ahead according to schedule. The question of getting the amount is a routine affair, when once it goes under the Second Five-Year Plan.

ಶ್ರೀ ಬಿ. ಹುಚ್ಚೇಗೌಡ.—ತಮ್ಮ ಸ್ಕೀಂಗಳಿಗೆ ಒಪ್ಪಿದ್ದಾರೆಯೇ ?

Sri H. SIDDAVEERAPPA. As I have said, these are the accepted schemes. We gave schemes costing 11·55 crores. Out of them, the accepted schemes come up to about Six crores.

ಶ್ರೀ ಬಿ. ಹುಚ್ಚೇಗೌಡ.—ಅವರು ಒಪ್ಪಿಕೊಳ್ಳದೆ ಇರುವುದು ಯಾವುವು ?

Sri H. SIDDAVEERAPPA.—Stainless steel is one of the items not accepted and it costs Rs. 4 5 crores.

Sri B. HUTCHE GOWDA.—To that extent this will be reduced.

Sri H. SIDDAVEERAPPA.—We have been asking the Government of India to examine it again. We know the various schemes that they have been allotting to Bhadravati are something more special than stainless steel.

ಶ್ರೀ ಬಿ. ಹುಚ್ಚೇಗೌಡ.—ಈಗ ಉತ್ತರ ದೇಶದಲ್ಲಿ ನೂರಾರು ಕೋಟಿ ರೂಪಾಯಿ ಖರ್ಚುಮಾಡಿ ಕೆಲಸ ಮಾಡುತ್ತಿದ್ದಾರೆ. ನಮಗೆ ಹನ್ನೊಂದು ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಹಿಂದುಮುಂದು ನೋಡುತ್ತಾರೆ. ಇಲ್ಲಿಯೂ ಅದೇ ಸ್ಕೇಲಿನಲ್ಲಿ ಸಹಾಯ ಮಾಡಿ ಕಾರ್ಖಾನೆಯನ್ನು ದೊಡ್ಡದು ಮಾಡುವುದಕ್ಕೆ, ಈಗಿರುವುದಕ್ಕಿಂತ ಎರಡರಷ್ಟಾದರೂ ಮಾಡುವುದಕ್ಕೆ ನೀವು ಸ್ವಲ್ಪ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಈ ಸ್ಕೀಮುಗಳೆಲ್ಲ ಮಂಜೂರಾದಮೇಲೆ, ಅವೆಲ್ಲ work up ಮೇಲೆ ಈಗಿರುವುದಕ್ಕಿಂತ ಎರಡರಷ್ಟೇಕೆ, ಮೂರರಷ್ಟು ಆಗುತ್ತದೆ.

---

9 A.M.

Rural Development under First Five-Year Plan.

Q.—468. Sri G. BASAPPA (Hosadurga).—

Will the Government be pleased to state :—

(*a*) the amount allotted in the First Five-Year Plan for Rural Development ;

(*b*) the amount spent in the first four years of the plan period ;

(*c*) whether they would spend the entire amount during the fifth year ;

(*d*) if not the reason for the same ?

A.—Sri T. CHANNIAH (Minister for Public Health and Local Self-Government).—

(*a*) Rs. 178·30 lakhs.

(*b*) Rs. 116·61 lakhs.

(*c*) and (*d*) The full amount originally allotted could not be spent. As after the Plan was proposed Government made over a share of the income

from Land Revenue to the local bodies for carrying on this work the entire expenditure could not be provided in the State Budget.

ಶ್ರೀ ಜಿ. ಬಸಪ್ಪ.—ಮೊದಲನೆಯ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷದಲ್ಲಿ ಎಷ್ಟು ಖರ್ಚಾಗಿದೆ ? ಎಷ್ಟು ಲ್ಯಾಪ್ಸ್ ಆಗಿದೆ ?

ಶ್ರೀ ಟಿ. ಚನ್ನಯ್ಯ.—(c) ಮತ್ತು (d) ಪ್ರಶ್ನೆಗೆ ಕೊಟ್ಟಿರುವ ಉತ್ತರ ನೋಡಿ ; ಏನೂ ಲ್ಯಾಪ್ಸ್ ಆಗಿಲ್ಲ.

ಶ್ರೀ ಜಿ. ಬಸಪ್ಪ.—116.61 ಲಕ್ಷ ರೂಪಾಯಿಗಳಿಗಿಂತ ಜಾಸ್ತಿ ಖರ್ಚಾಗಿಲ್ಲ, ಅಲ್ಲವೆ ?

ಶ್ರೀ ಟಿ. ಚನ್ನಯ್ಯ.—1955-56ಕ್ಕೆ ಬೇರೆ ಖರ್ಚಾಗಿದೆ. ಈಗ ಶೇಕಡ 12½ ಯಷ್ಟು ಲ್ಯಾಂಡ್ ರೆವೆನ್ಯೂ ಪಂಚಾಯಿತಿಗಳಿಗೆ ಅಸೈನ್ ಮಾಡಬೇಕಾಗಿರುವುದರಿಂದ ಅದರ ಪ್ರಕಾರ ಹಂಚುತ್ತಿದ್ದಾರೆ.

ಶ್ರೀ ಜಿ. ಬಸಪ್ಪ.—ಆ ರೀತಿ ಕಾನೂನಾಗಿ ಎಷ್ಟು ವರ್ಷವಾಯಿತು ?

ಶ್ರೀ ಟಿ. ಚನ್ನಯ್ಯ.—ಕಳೆದ ವರ್ಷ ಆಯಿತು.

ಶ್ರೀ ಜಿ. ಬಸಪ್ಪ.—ಗ್ರಾಮಪಂಚಾಯಿತಿ ಆಕ್ಟ್ ಪ್ರಕಾರ ಶೇಕಡ 12½ ಕೊಡಬೇಕೆಂದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಇದೆ.

ಶ್ರೀ ಜಿ. ಬಸಪ್ಪ.—ಆ ರೀತಿ ಕೊಡಲು ಎಷ್ಟು ವರ್ಷ ಆಗಬೇಕು ?

ಶ್ರೀ ಟಿ. ಚನ್ನಯ್ಯ.—ಎಲ್ಲಾ ಪಂಚಾಯಿತಿಗಳಿಗೂ ಹಂಚಿಕೆ ಮಾಡಿದರೆ ಬಹಳ ಕಡಮೆ ಹಣ ಬರುತ್ತದೆ. ಆದ್ದರಿಂದ ಹಂಚಿಕೆ ಮಾಡಲು ಕಷ್ಟವಾಗಿದೆ.

ಶ್ರೀ ಜಿ. ಬಸಪ್ಪ.—ಹಾಗಿದ್ದಮೇಲೆ ಕಾನೂನಿನಲ್ಲಿ ಆ ರೀತಿ ವಿಧಾಯಕ ಮಾಡಿರುವುದೇಕೆ ? ಎಲ್ಲಾ ಗ್ರಾಮಗಳೂ ಅಭಿವೃದ್ಧಿಯಾಗಲಿ ಎಂದು ತಾನೆ ?

ಶ್ರೀ ಟಿ. ಚನ್ನಯ್ಯ.—ಇನ್ನೂ ಹಂಚಿಕೆಮಾಡಿಲ್ಲ. ಈಗಿರುವ ಹಣದ ಜೊತೆಗೆ ಬೇರೆ ಅಲಾಟ್‌ಮೆಂಟ್ ಕೊಟ್ಟು ಗ್ರಾಮಪಂಚಾಯಿತಿಗಳನ್ನು ವೃದ್ಧಿ ಮಾಡಬೇಕೆಂದಿದೆ. ಯಾವರೀತಿ ಮಾಡಬೇಕು, ಹಣ ಎಲ್ಲಿಂದ ಒದಗಿಸಬೇಕು ಎಂಬುದನ್ನು ಯೋಚನೆ ಮಾಡುತ್ತೇವೆ.

ಶ್ರೀ ಜಿ. ಬಸಪ್ಪ.—ಅನೇಕ ಗ್ರಾಮಗಳಲ್ಲಿ ಯಾವ ಗ್ರಾಮಾಭಿವೃದ್ಧಿ ಕಾರ್ಯವೂ ಆಗಿಲ್ಲವೆಂಬುದು ಗೊತ್ತೆ ?

ಶ್ರೀ ಟಿ. ಚನ್ನಯ್ಯ.—ನಡೆಯುತ್ತಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಜಿಲ್ಲಾ ಬೋರ್ಡಿಗೆ ಸರ್ಕಾರದವರು ಕೊಡುವ ಶೇಕಡ 12½ ಯನ್ನು ಹಂಚುವವರು ಯಾರು ?

ಶ್ರೀ ಟಿ. ಚನ್ನಯ್ಯ.—ಸರ್ಕಾರದವರು ಜಿಲ್ಲಾ ಬೋರ್ಡಿಗೆ ಅಲಾಟ್ ಮಾಡುತ್ತಾರೆ, ಜಿಲ್ಲಾಬೋರ್ಡಿನವರು ಬೇಕಾದ ಕಡೆಗೆ ಒದಗಿಸುತ್ತಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅದನ್ನು ಯಾವ ಆಧಾರದಮೇಲೆ ಹಂಚಬೇಕೆಂದು ತೀರ್ಮಾನವಾಗಿದೆ ?

ಶ್ರೀ ಟಿ. ಚನ್ನಯ್ಯ.—ಕೆಲಸ ಎಲ್ಲಿ ನಡೆಯಬೇಕು ಎಂದು ನೋಡಿ ಆ ಆಧಾರದಮೇಲೆ ಒದಗಿಸುತ್ತಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಗ್ರಾಮಪಂಚಾಯಿತಿಗೆ ಶೇಕಡ 12½ ಕೊಡುವುದನ್ನು ಒಟ್ಟಾಗಿ ಡೆಪ್ಯೂಟಿ ಕಮಿಷನರ ವಶಕ್ಕೆ ತಾವು ಕೊಡುವುದು ?

ಶ್ರೀ ಟಿ. ಚನ್ನಯ್ಯ.—ಆಕ್ಟ್ ಪ್ರಕಾರ ಮಾಡುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಗೆ ಕೊಡುವುದರಿಂದ ಪಂಚಾಯಿತಿ ಕೆಲಸಕಾರ್ಯ ನಡೆಯಲು ಯಾವ ರೀತಿ ಸಹಾಯ ಮಾಡಿದ ಹಾಗಾಯಿತು ?

ಶ್ರೀ ಟಿ. ಚನ್ನಯ್ಯ.—ಸಂಸ್ಥಾನದಲ್ಲಿ 10-12 ಸಾವಿರ ಗ್ರಾಮಪಂಚಾಯಿತಿಗಳಿವೆ. ಈಗ ಲ್ಯಾಂಡ್ ರೆವೆನ್ಯೂ ಅಸೈನ್‌ಮೆಂಟ್ ಹಂಚಿದರೆ ಪ್ರತಿ ಗ್ರಾಮ ಪಂಚಾಯಿತಿಗೆ 1,500 ರೂಪಾಯಿಗಳು ಕೂಡ ಬರುವುದಿಲ್ಲ. ಆದ್ದರಿಂದಲೇ ಲ್ಯಾಂಡ್‌ರೆವೆನ್ಯೂ ಅಸೈನ್‌ಮೆಂಟ್ ಜೊತೆಗೆ ಬೇರೆ ಅಲಾಟ್‌ಮೆಂಟ್ ಕೊಟ್ಟು ಕೆಲಸ ಮಾಡಿಸುವುದು ಸೂಕ್ತವೆಂದು ಸರ್ಕಾರದವರು ಯೋಚಿಸಿ ಆ ಬಗ್ಗೆ ತೀರ್ಮಾನ ಕೈಕೊಳ್ಳಬೇಕಾಗಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಪ್ರಭಾವ ಶಾಲಿಗಳಿರುವ ಕಡೆ ಹಣ ಒದಗುತ್ತಿದೆಯೇ ಏನಾ ಎಲ್ಲಾ ಪಂಚಾಯಿತಿಗಳಿಗೂ ಸಹಾಯ ದೊರೆಯುತ್ತಿಲ್ಲ. ಆದ್ದರಿಂದ ಪಂಚಾಯಿತಿಗಳಿಗೆ ಹಂಚಿದರೆ ಎಷ್ಟು ಬರುತ್ತದೋ ಅಷ್ಟನ್ನಾದರೂ ಕ್ರೆಡಿಟ್ ಮಾಡಬಾರದೆ ?

ಶ್ರೀ ಟಿ. ಚನ್ನಯ್ಯ.—ಮಾಡಬಹುದು. ಆದರೆ ಲ್ಯಾಂಡ್ ರೆವೆನ್ಯೂ ಅಸೈನ್‌ಮೆಂಟ್ ಸಾಲುವುದಿಲ್ಲ, ಆದರ ಜೊತೆಗೆ ಅಡಿಷನಲ್ ಅಲಾಟ್‌ಮೆಂಟ್ ಕೊಡಬೇಕು ಎಂದು ಸರ್ಕಾರ ಯೋಚನೆ ಮಾಡುತ್ತಿದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಗ್ರಾಮಾಭಿವೃದ್ಧಿ ಯೋಜನೆ ಗ್ರಾಂಟಿನಲ್ಲಿ ಇಂಡಿಯಾ ಸರ್ಕಾರದವರು ಕೊಟ್ಟಿರುವ ಕೋಟಾ ಎಷ್ಟು ?

ಶ್ರೀ ಟಿ. ಚನ್ನಯ್ಯ.—ಅವರು ಅರ್ಧ ನಾವು ಅರ್ಧ ಕೊಡಬೇಕು. ಒಟ್ಟು ಗ್ರಾಂಟಿನಲ್ಲಿ 5 ಸಾವಿರ ಕೆಲಸಗಳಿಗೆ ಕೇಂದ್ರದವರು ಹಣ ಕೊಟ್ಟಿದ್ದಾರೆ, ಡೈರೆಕ್ಷನ್, ಆರ್ಗನೈಜೇಷನ್, ಪಬ್ಲಿಸಿಟಿ, ಪ್ರಾಪೊಗ್ಯಾಂಡ, ರೂರಲ್ ಪಾಟರ್ ನಪ್ಲೈ ಸ್ಕೀಮ್ಸ್, ರೂರಲ್ ಕಮ್ಯೂನಿಕೇಷನ್ಸ್, ರೂರಲ್ ಹೆಲ್ತ್, ಸ್ಯಾನಿಟೇಷನ್, ಸಿಬ್ಬಂದಿ ಇವುಗಳಿಗಾಗುವ ಖರ್ಚಿನಲ್ಲಿ ಅರ್ಧಭಾಗ ಒದಗಿಸುತ್ತಾರೆ ; ಸಂಸ್ಥಾನದ ಸರ್ಕಾರದವರು ಕೊಡುವುದು ಮತ್ತು ಗ್ರಾಮ ಫಂಡಿನಿಂದ ಬರುವ ಕಾಂಟ್ರಿಬ್ಯೂಷನ್ ಎರಡೂ ಸೇರಿ ಅರ್ಧಭಾಗ ಒದಗಿಸಲ್ಪಡುತ್ತದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಕೊಟ್ಟಿರುವ ಹಣವನ್ನು ಪೂರ್ತಿಯಾಗಿ ಖರ್ಚು ಮಾಡಿದೆಯೇ ಅಥವಾ ಅದು ಖರ್ಚಾಗದೆ ನಮ್ಮಲ್ಲೇ ಉಳಿಯುತ್ತಿದೆಯೇ ಅಥವಾ ಲ್ಯಾಪ್ಸ್ ಆಗಿ ಕೇಂದ್ರ ಸರ್ಕಾರಕ್ಕೆ ಹೋಗುತ್ತಿದೆಯೆ ?

ಶ್ರೀ ಟಿ. ಚನ್ನಯ್ಯ.—ಲ್ಯಾಪ್ಸ್ ಆಗುವುದಿಲ್ಲ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಹಾಗಾದರೆ ತಾವು ಡಿಸ್ಟ್ರಿಕ್ಟ್‌ಪಾರು ಅಥವಾ ತಾಲ್ಲೂಕುವಾರು ಕೊಟ್ಟಹಣ ಆ ವರ್ಷವೇ ಖರ್ಚಾಗದಿದ್ದರೆ ಲ್ಯಾಪ್ಸ್ ಆಗುವುದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಲ್ಯಾಪ್ಸ್ ಮಾಡಿಲ್ಲ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಲ್ಯಾಪ್ಸ್ ಆಗಿರುವ ಉದಾಹರಣೆಯಿದ್ದರೆ ಸರಿಪಡಿಸುತ್ತೀರಾ ? 1955-56ನೆಯ ಸಾಲಿಗೆ ಅಲಾಟ್ ಮಾಡಿದ ಹಣ ಖರ್ಚಾಗದೆ ಲ್ಯಾಪ್ಸ್ ಆಗುತ್ತಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಆ ತರಹ ಉದಾಹರಣೆ ಗಮನಕ್ಕೆ ಬಂದಿಲ್ಲ. ಇನ್ನೂ ಹೆಚ್ಚಾಗಿ ಖರ್ಚಾಗಿದೆ. ಸ್ಟೇಟ್ ಬಡ್ಜೆಟ್ಟಿನಲ್ಲಿ ಒದಗಿಸಬೇಕಾದ್ದನ್ನು ಒದಗಿಸುವುದಕ್ಕಾಗಲಿಲ್ಲ. ಲ್ಯಾಂಡ್ ರೆವೆನ್ಯೂ ಅಸೈನ್‌ಮೆಂಟ್ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಗ್ರಾಮ ಪಂಚಾಯಿತಿಗಳಿಗೆ ಕೊಟ್ಟಿಲ್ಲ. ಆದ್ದರಿಂದ ಎಷ್ಟು ಒದಗಿಸಿದ್ದಾರೋ ಅದನ್ನು ಉಪಯೋಗಿಸಿಕೊಂಡು ನಾವೂ ಕೂಡ ಎಕ್ಸ್‌ಟ್ರಾ ಎಕ್ಸ್‌ಪೆಂಡಿಚರ್ ಇಕರ್ ಮಾಡಿದ್ದೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗ ನೀವು ಡಿಸ್ಟ್ರಿಕ್ಟ್‌ವಾರು ಅಲಾಟ್ ಮಾಡುವ ಹಣ ಮತ್ತು ಗ್ರಾಮಪಂಚಾಯಿತಿಗಳಿಗೆ ಕೊಡುವ ಅಸ್ಸೈನ್‌ಮೆಂಟ್ ಗ್ರಾಂಟು ವಗೈರೆ ಆಯಾಕ್ಷೇತ್ರದ ಸದಸ್ಯರಿಗೆ ಗೊತ್ತಾಗುಪ್ರಹಾಗೆ ಹೇಳ್ಚುತ್ತಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಜಿಲ್ಲಾವಾರು ಅಲಾಟ್‌ಮೆಂಟ್ ಮಾಡುತ್ತೇವೆ. ಅದಕ್ಕೆ ಸಮಿತಿಯಿದೆ. ಸಮಿತಿಯವರು ಅಂದರೆ ಜಿಲ್ಲಾ ಸಮಿತಿಯವರು ಮತ್ತು ತಾಲ್ಲೂಕು ಅಡ್ವೈಜರಿ ಸಮಿತಿಯವರು ಅಡ್ಜಸ್ಟ್‌ಮೆಂಟ್ ಮಾಡುತ್ತಾರೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆಯಾ ಕ್ಷೇತ್ರದ ಪ್ರತಿನಿಧಿಗಳಿಗೆ ಗೊತ್ತಾಗುವ ಹಾಗೆ ಅಥವಾ ಅವರು ಸೂಚಿಸುವ ಕೆಲಸಗಳಿಗೆ ಹಂಚಿಕೆಮಾಡುವ ಹಾಗೆ ವ್ಯವಸ್ಥೆ ಮಾಡಿದೆಯೆ?

ಶ್ರೀ ಟಿ. ಚನ್ನಯ್ಯ.—ಇಲ್ಲ; ನಾವು ತಿಳಿಸುವುದಕ್ಕೆ ಮೊದಲೇ ಅವರೇ ತಿಳಿದುಕೊಳ್ಳುತ್ತಾರೆ, ತಿಳಿದು ಕೊಂಡು ತಕ್ಕ ವ್ಯವಸ್ಥೆ ಮಾಡುತ್ತಾರೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ನಿರ್ದಿಷ್ಟವಾದ ಪ್ಲಾನ್ ಇಲ್ಲದೆ ಎಲ್ಲ ಒತ್ತಾಯವಿದೆಯೋ, ಸರ್ಕಾರದಲ್ಲಿ ಯಾರು ಹೆಚ್ಚು ಪ್ರೆಷರ್ ಹಾಕುತ್ತಾರೋ ಅಂಥ ಕಡೆಗೆ ಮಾತ್ರ ಹಂಚಿ ಬಾಕಿ ಕಡೆ ಹಂಚದಿರುವ ನೀತಿ ಸರ್ಕಾರದಲ್ಲಿದೆಯೆ?

ಶ್ರೀ ಟಿ. ಚನ್ನಯ್ಯ.—ಸರ್ಕಾರದವರು ಅಂಥ ನೀತಿಯನ್ನನುಸರಿಸುತ್ತಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಒಂದು ಕಡೆ ವಿಶೇಷ ಗ್ರಾಂಟು ವಿಶೇಷ ಕೆಲಸ, ಇನ್ನೊಂದು ಕಡೆ ಯಾವ ಕೆಲಸವನ್ನೂ ಕೈಕೊಳ್ಳದಿರುವುದು ಸರ್ಕಾರದ ನೀತಿಯೆ?

ಶ್ರೀ ಟಿ. ಚನ್ನಯ್ಯ.—ಸರ್ಕಾರದ ನೀತಿ ಅದಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದಕ್ಕೆ ಯಾವುದಾದರೂ ಪ್ಲಾನ್ ಮಾಡಿದ್ದೀರಾ? ಡಿಸ್ಟ್ರಿಕ್ಟ್‌ಗೆ ಕೊಡುವ ಹಣ ಪ್ಲಾನ್ಡ್ ಬೇಸ್ಡ್‌ನ ಮೇಲೆ ಹಂಚಿಕೆಯಾಗುತ್ತಿದೆಯೆ?

ಶ್ರೀ ಟಿ. ಚನ್ನಯ್ಯ.—ಪ್ರತಿಯೊಂದು ಡಿಸ್ಟ್ರಿಕ್ಟ್ ಬೋರ್ಡಿನವರೂ ಕೂಡ ಸ್ಪೆಸಿಫಿಕ್ ಪ್ರಪೋಸಲ್, ಯೋಜನೆ ಹಾಕಿ ಪ್ರಯಾರಿಟಿ ಕೊಡಬೇಕಾದ್ದನ್ನು ಮೊದಲು ತೆಗೆದುಕೊಳ್ಳುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.—ಈಗಿನ ಪಂಚಾಯಿತಿ ಮತ್ತು ಡಿಸ್ಟ್ರಿಕ್ಟ್ ಬೋರ್ಡ್‌ಗಳ ಆಕ್ಟ್ 1952ನೆಯ ಇಸವಿ ಫೆಬ್ರವರಿಯಲ್ಲಿ ತಾನೆ ಜಾರಿಗೆ ಬಂದಿರುವುದು?

ಶ್ರೀ ಟಿ. ಚನ್ನಯ್ಯ.—ಅದು ಈ ಪ್ರಶ್ನೆಗೆ ಸಂಬಂಧಪಟ್ಟಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಕಾನೂನು ಪ್ರಕಾರ ಪಂಚಾಯಿತಿ ಕೋಟಾ ಕೊಡುತ್ತಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಬಿ. ಹುಚ್ಚೇಗೌಡ.—ಹಾಗೆ ಡಿಸ್ಟ್ರಿಬ್ಯೂಟ್ ಮಾಡದಿದ್ದುದು ಕಾನೂನಿಗೆ ವಿರೋಧವಾಗುವುದಿಲ್ಲವೇ!

ಶ್ರೀ ಟಿ. ಚನ್ನಯ್ಯ.—ಇಲ್ಲ.

District Board Roads, Bangalore District

Q.—800. Sri K. V. BYRE GOWDA (Bangalore North).—

Will the Government be pleased to state :—

(*a*) the length of District Board roads in the Bangalore North taluk;

(*b*) of them the names of roads which have been metalled;

(*c*) whether these roads are fit for vehicular traffic during rainy season?

A.—Sri T. CHANNIAH (Minister for Public Health and Local Self-Government).—

(*a*) 49 miles 3 furlongs.

(*b*) 1. Road from 5/15 of Bangalore-Doddaballapur road (Rajanakunte to Kakol) and on to Grass Farm.

2. Road From 6/6 of Hennur-Kannur road to Bagalur.

3. Road from 2/3 of Bangalore-Nagavara road to Kaval Byrasandra.

4. Road from 8/7 of Bangalore-Mysore road to Tavarekre *via* Hullal.

5. Road from Grass farm to Byatha.

6. Road from 1/5 of Bangalore-Tumkur road up to Yelahanka *via* Dodbettahalli.

7. Road from Nagavara to Thanisandra (under progress).

8. Road from 6th mile of Bangalore-Bellary road to Thindlu *via* Kodigehalli.

9. Road from Water Supply road to Hessarghatta.

10. Road from Bangalore-Bellary road to Jakkur.

11. Road from Yelahanka to Jakkur (under progress).

(*c*) Yes, they are fit for other than motor traffic during rainy season.

ಶ್ರೀ ಕೆ. ವಿ. ಬೈರೇಗೌಡ.—ಸರ್ಕಾರದವರು ಮುಖ್ಯ ಮುಖ್ಯವಾದ ರಸ್ತೆಗಳನ್ನೆಲ್ಲ ರಾಷ್ಟ್ರೀಕರಣ ಮಾಡಿದ ನಂತರ ಈ ಬಸ್ಸುಗಳ ಓಡಾಟ ಜಿಲ್ಲಾ ಬೋರ್ಡು ರಸ್ತೆಗಳಲ್ಲಿ ಜಾಸ್ತಿಯಾಗಿರುತ್ತೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಕೆ. ವಿ. ಬೈರೇಗೌಡ.—ಬೆಂಗಳೂರಿನಿಂದ ಹೊರಡತಕ್ಕ ಎಲ್ಲ ರಸ್ತೆಗಳನ್ನೂ ರಾಷ್ಟ್ರೀಕರಣ ಮಾಡಿಕೊಂಡಿರುವ ದರಿಂದ ತಾವೀಗ ಉತ್ತರದಲ್ಲಿ ತಿಳಿಸಿರುವ ನಂಬರ್ 1, 2, 5 ಮತ್ತು 6ನೆಯ ಐಟಂನಲ್ಲಿ ಕಂಡ